# ಕರ್ನಾಟಕ ವಿಧಾನ ಸಭೆ
## ಹದಿನಾಲ್ಕನೇ ವಿಧಾನಸಭೆ
## ಎಂಟನೇ ಅಧಿವೇಶನ
## (ಮುಂದುವರೆದ ಉಪವೇಶನಗಳು)

# ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2015
## (2015ರ ವಿಧಾನಸಭೆಯ ವಿಧೇಯಕ ಸಂಖ್ಯೆ - 38)

ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 ಮತ್ತು ಕರ್ನಾಟಕ ಪೌರಸಭೆಗಳು ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಅಧಿನಿಯಮ 14) ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ನಗರಪಾಲಿಕೆಗಳ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-** ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ 14) 353ನೇ ಪ್ರಕರಣದ (1)ನೇ ಉಪಪ್ರಕರಣಕ್ಕೆ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಅಧಿನಿಯಮ, 2006ರ (2006ರ ಕೇಂದ್ರ ಅಧಿನಿಯಮ, 27) ಅಡಿಯಲ್ಲಿ ಸಂಬಂಧಿಸಿದ ಜಿಲ್ಲಾ ಕೈಗಾರಿಕೆಗಳ ಕೇಂದ್ರದಲ್ಲಿ ನೋಂದಾಯಿಸಿದ ಎಲ್ಲಾ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ಕೈಗಾರಿಕಾ ನೆರವು ಸಚಿವಾಲಯ, ಕೈಗಾರಿಕಾ ನೀತಿ ಮತ್ತು ಉತ್ತೇಜನ ಇಲಾಖೆ, ಭಾರತ ಸರ್ಕಾರ ಇವರೊಂದಿಗೆ ಕೈಗಾರಿಕಾ ಉದ್ಯಮಗಳ ಜ್ಞಾಪನ ಪತ್ರ ಅಥವಾ ಕೈಗಾರಿಕಾ ಲೈಸೆನ್ಸ್‌ನ್ನು ದಾಖಲಿಸಿದ ಭಾರೀ ಕೈಗಾರಿಕೆಗಳು, ಮಾರಾಟ ಲೈಸೆನ್ಸನ್ನು ಪಡೆಯುವುದರಿಂದ ವಿನಾಯಿತಿಗೊಂಡಿವೆ."

**3. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.-**ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 22) 256ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಅಧಿನಿಯಮ, 2006ರ (2006ರ ಕೇಂದ್ರ ಅಧಿನಿಯಮ, 27) ಅಡಿಯಲ್ಲಿ ಸಂಬಂಧಿಸಿದ ಜಿಲ್ಲಾ ಕೈಗಾರಿಕೆಗಳ ಕೇಂದ್ರದಲ್ಲಿ ನೋಂದಾಯಿಸಿದ ಎಲ್ಲಾ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ಕೈಗಾರಿಕಾ ನೆರವು ಸಚಿವಾಲಯ, ಕೈಗಾರಿಕಾ ನೀತಿ ಮತ್ತು ಉತ್ತೇಜನ ಇಲಾಖೆ, ಭಾರತ ಸರ್ಕಾರ ಇವರೊಂದಿಗೆ ಕೈಗಾರಿಕಾ ಉದ್ಯಮಗಳ ಜ್ಞಾಪನ ಪತ್ರ ಅಥವಾ ಕೈಗಾರಿಕಾ ಲೈಸೆನ್ಸ್‌ನ್ನು ದಾಖಲಿಸಿದ ಭಾರೀ ಕೈಗಾರಿಕೆಗಳು, ಮಾರಾಟ ಲೈಸೆನ್ಸನ್ನು ಪಡೆಯುವುದರಿಂದ ವಿನಾಯಿತಿಗೊಂಡಿವೆ."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯಲ್ಲಿ ಮಾರಾಟ ಲೈಸೆನ್ಸ್‌ನ್ನು ಪಡೆಯುವುದರಿಂದ ಕೆಲವು ಉದ್ಯಮಗಳಿಗೆ ವಿನಾಯಿತಿಯನ್ನು ನೀಡುವ ಮೂಲಕ 2014–19ರ ಕರ್ನಾಟಕ ಕೈಗಾರಿಕಾ ನೀತಿಯ ಉದ್ದೇಶಗಳನ್ನು ಈಡೇರಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ವಿನಯಕುಮಾರ ಸೊರಕೆ**
ನಗರಾಭಿವೃದ್ಧಿ ಸಚಿವರು

**ಎಸ್. ವೈ. ಕುಳಗೇರಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ
## ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ
## (1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಉದ್ಧೃತ ಭಾಗ

**XX XX XX**

**356. ಆಯುಕ್ತರ ಅನುಮತಿಯಿಲ್ಲದೆ ಆವಿ-ಶಿಳ್ಳೆಯನ್ನು ಅಥವಾ ಆವಿ-ಕಹಳೆಯನ್ನು ಬಳಸುವುದಕ್ಕೆ ನಿಷೇಧ.**- (1) ಯಾರೇ ವ್ಯಕ್ತಿಯು, ಆಯುಕ್ತರ ಲಿಖಿತ ಅನುಮತಿಯಿಲ್ಲದೆ, ಯಾವುದೇ ಕಾರ್ಖಾನೆಯಲ್ಲಿ ಅಥವಾ ಯಾವುದೇ ಇತರ ಸ್ಥಳದಲ್ಲಿ, ಅಲ್ಲಿ ನಿಯೋಜಿತರಾದ ಕೆಲಸಗಾರರನ್ನು ಅಥವಾ ವ್ಯಕ್ತಿಗಳನ್ನು ಕರೆಯುವ ಅಥವಾ ಕಳುಹಿಸುವ ಉದ್ದೇಶಕ್ಕಾಗಿ ಯಾವುದೇ ಆವಿ-ಶಿಳ್ಳೆಯನ್ನು ಅಥವಾ ಆವಿ-ಕಹಳೆಯನ್ನು ಬಳಸತಕ್ಕದ್ದಲ್ಲ ಅಥವಾ ಅಳವಡಿಸತಕ್ಕದ್ದಲ್ಲ.

**XX XX XX**

## ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ
## (1964ರ ಕರ್ನಾಟಕ ಅಧಿನಿಯಮ 22) ಉದ್ಧೃತ ಭಾಗ

**XX XX XX**

**256. ಲೈಸೆನ್ಸ್ ಪಡೆಯದೆ ಕೆಲವು ಉದ್ದೇಶಗಳಿಗಾಗಿ ಆವರಣವನ್ನು ಉಪಯೋಗಿಸತಕ್ಕದ್ದು.**- (1) ಯಾರೇ ವ್ಯಕ್ತಿಯು, ಈ ಬಗ್ಗೆ ಮುನಿಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಮಂಜೂರು ಮಾಡಿದ ಲೈಸೆನ್ಸ್ ಇಲ್ಲದೆ ಅಥವಾ ಅದರ ನಿಬಂಧನೆಗಳಿಗನುಗುಣವಾಗಿ ಅಲ್ಲದೆ ಅನ್ಯಥಾ ಈ ಕೆಳಕಂಡ ಯಾವುದೇ ಉದ್ದೇಶಗಳಿಗಾಗಿ ಯಾವುದೇ ಆವರಣವನ್ನು ಉಪಯೋಗಿಸತಕ್ಕದ್ದಲ್ಲ, ಎಂದರೆ:-

(ಕ) XIII ನೇ ಅನುಸೂಚಿಯ Iನೇ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶ;

(ಖ) ಮುನಿಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನ ಅಭಿಪ್ರಾಯದಂತೆ ಪ್ರಾಣ, ಆರೋಗ್ಯ ಅಥವಾ ಸ್ವತ್ತಿಗೆ ಅಪಾಯಕಾರಿ ಅಥವಾ ಉಪದ್ರವವನ್ನುಂಟು ಮಾಡುವ ಸಂಭವವಿರುವಂಥ ಯಾವುದೇ ಉದ್ದೇಶ;

(ಗ) ಕುದುರೆಗಳು, ಜಾನುವಾರು ಅಥವಾ ಇತರ ಚತುಷ್ಪಾದ ಪ್ರಾಣಿಗಳು ಅಥವಾ ಪಕ್ಷಿಗಳನ್ನು ಸಾಗಣೆ, ಮಾರಾಟ ಅಥವಾ ಬಾಡಿಗೆಗಾಗಿ ಅಥವಾ ಅವುಗಳ ಉತ್ಪನ್ನದ ಮಾರಾಟಕ್ಕಾಗಿ; ಅಥವಾ

(ಘ) ಆ ಯಾವುದೇ ವಸ್ತುವನ್ನು ಗೃಹಪಯೋಗಕ್ಕಲ್ಲದೆ XIIIನೇ ಅನುಸೂಚಿಯ IIನೇ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಸ್ತುವಿನ ದಾಸ್ತಾನು;

ಪರಂತು, ಮುನ್ಸಿಪಲ್ ಕೌನ್ಸಿಲು, ಯಾವ ಆವರಣದಲ್ಲಿ ಮಾರಾಟಕ್ಕಾಗಿ ದಾಸ್ತಾನು ಮಾಡಿದ ವಸ್ತುಗಳ ಒಟ್ಟು ಪ್ರಮಾಣವು, ಅಂಥ ಯಾವುವೇ ವಸ್ತುಗಳ ಸಂಬಂಧದಲ್ಲಿ ಉಪವಿಧಿಗಳ ಮೂಲಕ ನಿಯಮಿಸಬಹುದಾದಂಥ ಪ್ರಮಾಣವನ್ನು ಮೀರದಂಥ, ಆ ಯಾವುದೇ ಆವರಣವನ್ನು (ಘ) ಖಂಡದ ಪ್ರವರ್ತನೆಯಿಂದ ವಿನಾಯಿತಿಗೊಳಿಸತಕ್ಕದ್ದೆಂದು ಘೋಷಿಸಬಹುದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750-ಪ್ರತಿಗಳು 31ನೇ ಜುಲೈ, 2015

KARNATAKA LEGISLATIVE ASSEMBLY

FOURTEENTH LEGISLATIVE ASSEMBLY

EIGHTH SESSION

(ADJOURNED MEETING)

# THE KARNATAKA MUNICIPAL CORPORATIONS AND CERTAIN OTHER LAW (AMENDMENT) BILL, 2015

**(L.A. Bill No. 38 of 2015)**

A Bill further to amend the Karnataka Municipal Corporations Act, 1976 and the Karnataka Municipalities Act, 1964.

Whereas it is expedient further to amend the Karnataka Municipal Corporations Act, 1976 (Karnataka Act 14 of 1977) and the Karnataka Municipalities Act, 1964 (Karnataka Act 22 of 1964) for the purposes hereinafter appearing;

Be it enacted by the Karnataka State Legislature in the Sixty sixth year of the Republic of India as follows:-

**1. Short title and commencement.-** (1) This Act may be called the Karnataka Municipal Corporations and Certain Other Law (Amendment) Act, 2015.

(2) It shall come into force at once.

**2. Amendment of the Karnataka Act 14 of 1977.-** In the Karnataka Municipal Corporations Act, 1976 (Karnataka Act 14 of 1977) in section 353, in sub- section (1), the following proviso shall be inserted, namely:-

"Provided that, all Micro, small and Medium Enterprises registered under the Micro, Small and Medium Enterprises Development Act, 2006 (Central Act 27 of 2006) in concerned District Industries Centre and Large Industries who have filed Industrial Entrepreneurs Memorandum or Industrial License with the Secretariat of Industrial Assistance, Department of Industrial Policy and Promotion, Government of India are exempted from obtaining trade license."

**3. Amendment of the Karnataka Act 22 of 1964.-** In the Karnataka Municipalities Act, 1964 (Karnataka Act 22 of 1964),in section 256, in sub-section(1), after the proviso, the following shall be inserted, namely:-

"Provided further that, all Micro, small and Medium Enterprises registered under the Micro, Small and Medium Enterprises Development Act, 2006 (Central Act 27 of 2006) in concerned District Industries Centre and Large Industries who have filed Industrial Entrepreneurs Memorandum or Industrial License with the Secretariat of Industrial Assistance, Department of Industrial Policy and Promotion, Government of India are exempted from obtaining trade license."

## ANNEXURE

## THE EXTRACT FROM THE KARNATAKA MUNICIPAL CORPORATIONS ACT,1976 (KARNATAKA ACT NO.14 OF 1977)

**X X** **XX** **XX**

356. Prohibition of use of steam-whistle or steam-trumpet without permission of the Commissioner.- (1) No person shall, without the written permission of the Commissioner, use or employ in any factory or any other place, any steam-whistle or steam-trumpet for purpose of summoning or dismissing workmen or persons employed.

**X X** **XX** **XX**

## THE EXTRACT FROM THE KARNATAKA MUNICIPALITIES ACT, 1964 (KARNATAKA ACT NO. 22 OF 1964)

**X X** **XX** **XX**

256. Premises not to be used for certain purposes without licence.—(1) No person shall use or permit to be used any premises for any of the following purposes without or otherwise than in conformity with the terms of a licence granted by the Municipal Commissioner or Chief Officer in this behalf, namely:—

(a) any of the purposes specified in Part I of Schedule XIII;

(b) any purpose which is, in the opinion of the Municipal Commissioner or Chief Officer dangerous to life, health or property or likely to cause a nuisance;

(c) keeping horses, cattle or other quadruped animals or birds for transportation, sale or hire or for sale of the produce thereof; or

(d) storing any of the articles specified in Part II of Schedule XIII except for domestic use of any of those articles:

Provided that the municipal council may declare that premises in which the aggregate quantity of articles stored for sale does not exceed such quantity as may be prescribed by bye-laws in respect of any such articles shall be exempted from the operation of clause (d).

**X X** **XX** **XX**

Government Press, Vikasa Soudha, Bengaluru, P7, W.D. , Copies 750, 18th, 2015